ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ BENGALURU CENTRAL UNIVERSITY

# ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ

ಸೆಂಟ್ರಲ್ ಕಾಲೇಜು ಆವರಣ, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು-560001

ದೂ.ಸಂಖ್ಯೆ:22295559, ಈ-ಮೇಲ್: registrarevlubcu@gmail.com

ಸಂಖ್ಯೆ: ಬೆಂ.ಕೇ.ವಿ/ಪ.ವಿ/ಪರೀಕ್ಷಾ ಮೌಲ್ಯಮಾಪನ/ಯು.ಜಿ/2019-20/389 ದಿನಾಂಕ 16-12-2019

## ಸುತ್ತೋಲೆ

ವಿಷಯ: 2019-20ನೇ ಸಾಲಿನ ವಿವಿಧ ಪದವಿ ಪರೀಕ್ಷೆಗಳ (ಮೊದಲನೇ ಮತ್ತು ಮೂರನೇ ಸೆಮಿಸ್ಟರ್) ಮೌಲ್ಯಮಾಪನ ಕಾರ್ಯಕ್ಕೆ ಎಲ್ಲಾ ಅರ್ಹ ಅಧ್ಯಾಪಕರನ್ನು (ಅತಿಥಿ ಉಪನ್ಯಾಸಕರು ಸೇರಿದಂತೆ) ಕಳುಹಿಸಿಕೊಡುವ ಬಗ್ಗೆ.

ಉಲ್ಲೇಖ: 1. ಈ ಕಛೇರಿಯ ಸುತ್ತೋಲೆ ಸಂಖ್ಯೆ. ಸಂಖ್ಯೆ: ಬೆಂ.ಕೇ.ವಿ/ಪ.ವಿ/ಪರೀಕ್ಷಾಮೌಲ್ಯಮಾಪನ/ಯು.ಜಿ/ 2019-20 ದಿನಾಂಕ 07-12-2019

****

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ತಮಗೆ ತಿಳಿಸುವುದೇನೆಂದರೆ, ದಿನಾಂಕ 25-11-2019 ರಿಂದ ನಡೆಯುತ್ತಿರುವ ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ಗಳ ಸ್ನಾತಕ ಕೋರ್ಸುಗಳ ಮೌಲ್ಯಮಾಪನ ಕಾರ್ಯ ದಿನಾಂಕ 09-12-2019ರಿಂದ ಪ್ರಾರಂಭವಾಗಿದೆ. ಈ ಹಿನ್ನಲೆಯಲ್ಲಿ ತಾವು ತಪ್ಪದೆ ತಮ್ಮ ಕಾಲೇಜಿನ ಎಲ್ಲಾ ಅರ್ಹ ಅಧ್ಯಾಪಕರನ್ನು (ಅತಿಥಿ ಉಪನ್ಯಾಸಕರು ಸೇರಿದಂತೆ) ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಭಾಗವಹಿಸಲು ನಿರ್ದೇಶನ ನೀಡಬೇಕೆಂದು ಕೋರಿ ಅದರಲ್ಲೂ ಪ್ರಮುಖವಾಗಿ ಎಲ್ಲಾ ಅರ್ಹ ಇಂಗ್ಲೀಷ್ ಭಾಷೆ ಮತ್ತು ವಾಣಿಜ್ಯ ವಿಷಯದ ಅಧ್ಯಾಪಕರನ್ನು ಪ್ರಾರಂಭದ ದಿನದಿಂದಲೇ ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸಲು ತಿಳಿಸಬೇಕೆಂದು ಕೋರಿ ದಿನಾಂಕ 07-12-2019ರಂದು ಸುತ್ತೋಲೆಯನ್ನು ಕಳುಹಿಸಲಾಗಿದೆ. ಆದರೂ ಸಹ ಕೆಲವು ಕಾಲೇಜಿನಿಂದ ಅಧ್ಯಾಪಕರು ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸದಿರುವುದು ಕಂಡು ಬಂದಿದೆ. ಇದರಿಂದ, ಮೌಲ್ಯಮಾಪನ ಕಾರ್ಯ ನಿಧಾನವಾಗುವುದರ ಜೊತೆ ಮುಂದಿನ ಶೈಕ್ಷಣಿಕ ವೇಳಾಪಟ್ಟಿ ಪ್ರಕಾರ ತರಗತಿಗಳು ಪ್ರಾರಂಭಿಸಿ, ಸಕಾಲದಲ್ಲಿ ಪರೀಕ್ಷೆಗಳನ್ನು ನಡೆಸಲು ಅನಾನುಕೂಲವಾಗುತ್ತದೆ. ಆದುದರಿಂದ, ಎಲ್ಲಾ ಅಧ್ಯಾಪಕರುಗಳನ್ನು ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸಲು ಸೂಚಿಸಬೇಕೆಂದು ಮತ್ತೊಮ್ಮೆ ಕೋರಲಾಗಿದೆ.

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯವು ಕಳೆದ ಎರಡು ಪರೀಕ್ಷೆಗಳ ಫಲಿತಾಂಶಗಳನ್ನು ನಿಗದಿತ ವೇಳೆಯಲ್ಲಿ ಪ್ರಕಟಿಸಿ, ನಿಗದಿತ ದಿನಾಂಕಗಳಂದು ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಿದೆ. ಆದರೆ ಈ ಸಾರಿ ಎರಡು ಸೆಮಿಸ್ಟರ್‌ಗಳ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಬೇಕಾಗಿರುವುದರಿಂದ ಕಾಲೇಜುಗಳ ಎಲ್ಲಾ ಅರ್ಹ ಅಧ್ಯಾಪಕರ ಭಾಗವಹಿಸುವಿಕೆ ಕಡ್ಡಾಯವಾಗಿದೆ. ಆದಕಾರಣ, ಎಲ್ಲಾ ಅಧ್ಯಾಪಕರು ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸಿ ಸಹಕರಿಸಲು ಕೋರಿದೆ. ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸದ ಅಧ್ಯಾಪಕರ ಹಾಗೂ ಕಾಲೇಜಿನ ಮೇಲೆ ನಿಯಮದ ಪ್ರಕಾರ ಸೂಕ್ತ ಕ್ರಮ ಜರುಗಿಸಲಾಗುವುದು.

ಆದುದರಿಂದ, ದಯಮಾಡಿ ತಾವು ಈ ವಿಚಾರದಲ್ಲಿ ಸಕ್ರಿಯ ಸಹಕಾರ ನೀಡಬೇಕೆಂದು ಕೋರಿಕೆ.

16/12/19

ಕುಲಸಚಿವರು(ಮೌಲ್ಯಮಾಪನ)

ಗೆ,

ಎಲ್ಲಾ ಪ್ರಾಂಶುಪಲರುಗಳು
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳು

ಪ್ರತಿಗಳು:

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ವಿಧಾನ ವೀಧಿ, ಮಹಾರಾಣಿ ಕಾಲೇಜು ಎದರು, ಬೆಂಗಳೂರು – 560001.
2. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು – 560001.
3. ಮೆ. ಲಾಜಿಸಿಸ್, ಬೆಂಗಳೂರು, ಈ ಸುತ್ತೋಲೆಯನ್ನು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಮತ್ತು ಎಲ್ಲಾ ಯು.ಜಿ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಕಾಲೇಜ್ ಪೋರ್ಟಲ್/ ಎಸ್.ಎಂ.ಎಸ್ ಮೂಲಕ ಮಾಹಿತಿ ಒದಗಿಸಲು ಕೋರಿದೆ.